

ಕ್ಷಮಾ ರಾವ್ ನೃತ್ಯಭಂಗಿಗಳು

ಸಂಗೀತ ಸಂಯೋಜಿಸುವುದು... ಹೀಗೆ. ಕಲಾವಿದರಾದ ಸಂಜುಕ್ತಾ ಪಾಣಿಗ್ರಹಿ, ರಘುನಾಥ್ ಪಾಣಿಗ್ರಹಿ ಅವರು ರಾತ್ರಿ ಹತ್ತು ಗಂಟೆಗೆ ಬಂದು ಅಭ್ಯಾಸ ಮಾಡುತ್ತಿದ್ದರು ಮತ್ತು ಗುರುಗಳು ಅವರಿಗಾಗಿ ಕಂಪೋಸ್ ಮಾಡುತ್ತಿದ್ದರೆ, ನಾವೆಲ್ಲ ಕುಳಿತು ಅದನ್ನು ನೋಡುತ್ತಿದ್ದೆವು. ಕೊರಿಯೊಗ್ರಫಿ ಕಲಿಯುವ ಅವಕಾಶ ಸಿಗುತ್ತಿತ್ತು. ಇದೆಲ್ಲ ಆಗಿ ಮಧ್ಯರಾತ್ರಿ ಸರಳವಾಗಿ ದಾಲ್ ಮತ್ತು ಅನ್ನ-ರೊಟ್ಟಿ ಊಟ. ಒಟ್ಟಿನಲ್ಲಿ ಒಂದು ವರ್ಷದ ಪಾಠವನ್ನು ಒಂದು ತಿಂಗಳಲ್ಲಿ ಮಾಡಿ, ಕಳಿಸುತ್ತಿದ್ದರು. ಮತ್ತೆ ಮರುವರ್ಷ ಅದೇ ತಿಂಗಳು ಶಿಬಿರಕ್ಕೆ ತೆರಳಿ ಕಲಿಕೆ ಮುಂದುವರೆಯುತ್ತಿತ್ತು. ನನ್ನ ಪರಿಚಿತರೆಲ್ಲರೂ, 'ಇದೆಲ್ಲ ಯಾಕೆ ನಿಂಗೆ ಈ ವಯಸ್ಸಿನಲ್ಲಿ...' ಎಂದು ಕೇಳುತ್ತಿದ್ದರು. ಆದರೆ ನಂಗೆ ಆ ಕಲೆಯ ಮೇಲೆ ಪ್ರೀತಿ ಹುಟ್ಟಿತ್ತಲ್ಲ. ಆ ಅದಮ್ಯ ಆಸೆಯನ್ನು ತಡೆದುಕೊಳ್ಳುವುದು ಸಾಧ್ಯವಿರಲಿಲ್ಲ. ಒಡಿಸ್ಸಿ ನೃತ್ಯಕ್ಕೆ ಬಳಸುವ ಸಂಗೀತ ಎಷ್ಟೊಂದು ಚಂದ. ಅದರಲ್ಲಿ ಒರಿಸ್ಸಾದ ಜನಪದದ ಕಂಪು ಇದೆ. ಒಡಿಸ್ಸಿ ನೃತ್ಯಕ್ಕೆ ಅಲ್ಲಿನ ಸಂಗೀತಕ್ಕೆ ಬದಲಿಯಾಗಿ ಬೇರೆ ಸಂಗೀತವನ್ನು ಅಳವಡಿಸಿದರೆ ಅದರ ಒಟ್ಟಂದ ಕೆಡುತ್ತದೆ. ಹಿಂದೆಲ್ಲ ಹಾಡುಗಳನ್ನು ಗುರುಗಳು ಕ್ಯಾಸೆಟ್ ಮಾಡಿ ಕೊಡುತ್ತಿದ್ದರು. ಅದನ್ನು ಇಟ್ಟುಕೊಂಡು ವರ್ಷವಿಡೀ ನಾವು ಕಠಿಣ ಅಭ್ಯಾಸ ಮಾಡಬೇಕು. ಮುಂದಿನ ವರ್ಷ ಅಭ್ಯಾಸ ಮಾಡದೇ ಹಾಗೆಯೇ ಹೋದರೆ ಅವರಿಗೆ ಸಿಟ್ಟು ಬರುತ್ತಿತ್ತು. ನನ್ನ ಹಾಗೆ ಈ ನೃತ್ಯದ ಅಪ್ಪಟ ಹುಚ್ಚು ಹಿಡಿಸಿಕೊಂಡವರು ದೇಶದ ಮೂಲೆ ಮೂಲೆಗಳಿಂದ ಅಲ್ಲಿಗೆ ಬರುತ್ತಿದ್ದರು. ಬಾಂಬೆ, ಕಲ್ಕತ್ತಾ, ದೆಹಲಿ ಮತ್ತಿತರ ಜಾಗಗಳಿಂದ ಶಿಷ್ಯಂದಿರು ಬರುತ್ತಿದ್ದರು. ಗುರುಗಳೂ ಹಲವು ಕಡೆಗಳಲ್ಲಿ ಈ ರೀತಿಯ ಕಾರ್ಯಾಗಾರ ಮಾಡುತ್ತಿದ್ದರು.

◆ ನಿಮ್ಮ ಒಡಿಸ್ಸಿ ನೃತ್ಯ ಪ್ರಸ್ತುತಿಯನ್ನು ಅಪ್ಪ ನೋಡಿದ್ದರೇ? ಅದರ ಬಗ್ಗೆ ಏನಾದರೂ ಪ್ರತಿಕ್ರಿಯೆ ನೀಡಿದ್ದರೇ?

ಒಮ್ಮೆ ನಾನು ಅಪ್ಪನೊಡನೆ ದುಬೈ ಮತ್ತು ಅಬುದಾಬಿಗೆ ಹೋಗಿದ್ದೆ. ನಾನು ಅಲ್ಲೊಂದು ಕಾರ್ಯಕ್ರಮ ನೀಡಬೇಕಿತ್ತು. ಆಗ ನನ್ನ ಬಳಿ ಒಡಿಸ್ಸಿ ನೃತ್ಯಕ್ಕೆ ಸಂಬಂಧಿಸಿದ ಸಂಗೀತದ ಧ್ವನಿಮುದ್ರಿಕೆ ಇತ್ತು. ಆಯೋಜಕರು ನನಗೆ ಮತ್ತು ಅಪ್ಪನಿಗೆ ಒಂದೇ ಕೊಠಡಿ